
# ಅಗಣಿತ ಚಿತ್ರಗಳ ಬ್ಯಾಂಡ್ ಸ್ಟ್ಯಾಂಡ್

ಮುಂಬೈ ಮಹಾನಗರಿಯ ಬಾಂದ್ರಾದ 'ಬ್ಯಾಂಡ್ ಸ್ಟ್ಯಾಂಡ್' ಬಹುತ್ವ ಭಾರತದ ಒಂದು ಸುಂದರ ಮಾದರಿ. ಪ್ರೇಮ ಹಾಗೂ ಜೀವನೋತ್ಸಾಹದ ರಮ್ಯಚಿತ್ರಗಳು ಇಲ್ಲಿ ಕಾಣಸಿಗುತ್ತವೆ.

■ ಕಲಾವತಿ ಬೈಚಬಾಳ



ಬಾಂದ್ರಾ ಬ್ಯಾಂಡ್ ಸ್ಟ್ಯಾಂಡ್‌ನ ಸಮುದ್ರ ತೀರ

ಸದಾ ಜನಜಂಗುಳಿ. ಅಚ್ಚುಕಟ್ಟಾದ ರಸ್ತೆಗಳು. ಕತ್ತೆತ್ತಿ ನೋಡುವಂತಹ ಗಗನಚುಂಬಿ ಬಹುಮಹಡಿ ಕಟ್ಟಡಗಳು. ಒಂದಕ್ಕಿಂತ ಒಂದು ಭಿನ್ನ ಎನಿಸುವ ವಿಶಾಲ ಮನೆಗಳ ಮುಂದೆ, ಆವರಣದಲ್ಲಿ ಸಾಲುಸಾಲು ತರಹೇವಾರಿ ಗಿಡಗಳು. ಎಲ್ಲೋ ಮೊಳಗುವ ಚರ್ಚ್‌ನ ಗಂಟೆ, ಪ್ರಾರ್ಥನೆಯ ನಿನಾದ. ಕೊಂಚ ದೂರದಲ್ಲೇ ಭೋರ್ಗರೆವ ಸಮುದ್ರದ ಅಲೆಗಳ ಸದ್ದು.

ಮೊದಲ ಬಾರಿ ಮಾಯಾನಗರಿ ಮುಂಬೈಗೆ ಕಾಲಿಟ್ಟಾಗ ಬಾಂದ್ರಾ ಪಶ್ಚಿಮ ಭಾಗದಲ್ಲಿನ ಕೇನ್ ರಸ್ತೆ ಸಮೀಪದ ಬಾಂದ್ರಾ ಬ್ಯಾಂಡ್ ಸ್ಟ್ಯಾಂಡ್ ಸುತ್ತಮುತ್ತ ಕಂಡ ಚಿತ್ರಣಗಳಿವು.

ಬಾಂದ್ರಾ ಬ್ಯಾಂಡ್ ಸ್ಟ್ಯಾಂಡ್‌ನಲ್ಲಿ ಪ್ರತಿದಿನವೂ ಜನಜಂಗುಳಿ. ಭಾಷೆ, ಗಡಿಗಳನ್ನೂ ದಾಟಿ ಬದುಕು ಕಟ್ಟಿಕೊಂಡು, ಇಲ್ಲಿಯೇ ಬೀಡುಬಿಟ್ಟವರು ಹಲವರಿದ್ದಾರೆ. ಅಂತಸ್ತು, ಹಮ್ಮುಬಿಮ್ಮುಗಳನ್ನು ಬದಿಗಿಟ್ಟು, ಬೊಗಸೆಯಷ್ಟು ಪ್ರೀತಿ, ಶಾಂತಿ, ಮನರಂಜನೆಯಷ್ಟೇ ಅಲ್ಲದೆ ಸಮುದ್ರದ ಅಲೆಗಳ ಜೊತೆ ಎದೆಯ ಭಾರ ಹಂಚಿಕೊಂಡು, ಅತ್ತು ಹಗುರಾಗಿ, ಅಲೆಗಳಂತೆ ಮತ್ತೆ ಪುಟಿದೇಳಲು, ಉತ್ಸುಕರಾಗಲು ಬರುವವರು... ಹೀಗೆ ಎಲ್ಲರೂ ಒಂದೆಡೆ ಸೇರುವ ಜಾಗ ಇದು.

ಪೋರ್ಚುಗೀಸರು ಮತ್ತು ಬ್ರಿಟಿಷರ ಕಾಲದಲ್ಲಿ ನಿರ್ಮಾಣಗೊಂಡಿರುವ ಬಾಂದ್ರಾ ಕೋಟೆ, ಸದ್ಯ ಹೇಳಿಕೊಳ್ಳುವಂತಹ ಸ್ಥಿತಿಯಲ್ಲಿ ಇಲ್ಲವಾದರೂ ಅದರ ವೀಕ್ಷಣೆಗೆಂದು ನಿತ್ಯ ಸಾವಿರಾರು ಜನ ಬರುತ್ತಾರೆ.

"ಆಡಳಿತಶಾಹಿ ವರ್ಗಕ್ಕೆ ಮನರಂಜನೆ ನೀಡಲೆಂದು ಅಂದಿನ ಸೈನಿಕರು ಇಲ್ಲಿ ಬ್ಯಾಂಡ್ ಬಾರಿಸುತ್ತಿದ್ದರು. ಹಾಗಾಗಿಯೇ ಇದಕ್ಕೆ 'ಬ್ಯಾಂಡ್ ಸ್ಟ್ಯಾಂಡ್' ಎಂಬ ಹೆಸರು ಬಂದಿದೆ" ಎಂದು ಹುಬ್ಬಳ್ಳಿ ಮೂಲದ ಕನ್ನಡ ಶಿಕ್ಷಕ ದುರ್ಗಪ್ಪ ಕೋಟಿಯವರ ಹೇಳುತ್ತಾರೆ. ಅವರು 14 ವರ್ಷಗಳಿಂದ ಇಲ್ಲಿಯೇ ನೆಲೆಸಿದ್ದಾರೆ.

ಬೃಹತ್ತಾದ ಮಹಾದ್ವಾರದಿಂದ ಆರಂಭವಾಗುವ, ಅಂದಾಜು ಎರಡು–ಮೂರು ಕಿ.ಮೀ. ವ್ಯಾಪಿಸಿಕೊಂಡಿರುವ ಸಮುದ್ರ ದಂಡೆ, ನಡಿಗೆ ಪಥವನ್ನು ಇಲ್ಲಿನ ಮಹಾನಗರ ಪಾಲಿಕೆ ನಿರ್ವಹಿಸುತ್ತಿದೆ. ಜನರು ಹಾಕುವ ಆಹಾರಕ್ಕೆಂದು ಅಪಾರ ಸಂಖ್ಯೆಯಲ್ಲಿ ಕಾಗೆ, ಪಾರಿವಾಳಗಳು ಬಂದರೆ, ಏಕಾಂತ ಕಳೆಯಲು 'ಪ್ರೀತಿ ಹಕ್ಕಿ'ಗಳು ಜೊತೆ ಇರುತ್ತವೆ. ಈ ಸ್ಥಳಕ್ಕೆ ಇರುವ ಚೆಂದದ ಹೆಸರು; 'ಲವರ್ಸ್ ಪಾಯಿಂಟ್'.

ಬಗೆಬಗೆಯ ಕುರುಕಲು, ಮಸಾಲೆ ತಿನಿಸು, ಹಣ್ಣು, ತರಕಾರಿ ಸಲಾಡ್, ಕಾಫಿ, ಚಹಾ ಮತ್ತಿತರ ಪಾನೀಯ, ಬಲೂನ್ ವ್ಯಾಪಾರಿಗಳ ದುಡಿಮೆಗೆ ಈ ಜಾಗವೇ ದಾರಿ. ಕಂಕುಳಲ್ಲಿ ಕಂದನ ಕೂರಿಸಿಕೊಂಡು, ಅಂಗವೈಕಲ್ಯವನ್ನೂ ಮೀರಿ ತುತ್ತಿನಚೀಲ ತುಂಬಿಸಿಕೊಳ್ಳಲು ಹೆಣಗಾಡುವವರ ಪರಿಶ್ರಮ, ಇಲ್ಲಿನ ಜನ 'ಕಾಯಕ'ವನ್ನೇ ಉಸಿರಾಗಿಸಿಕೊಂಡಿದ್ದನ್ನು ಪರಿಚಯಿಸುತ್ತದೆ.

'ಕೈಯಲ್ಲಿ ಹಣವಿಲ್ಲದಿದ್ದರೆ ಇಲ್ಲಿ ಬೆಲೆ ಇಲ್ಲ. ಬದುಕು ನಡೆಸೋದು ಮುಖ್ಯ, ಅಂಗವಿಕಲತೆಯಲ್ಲ. ಬೆಳಿಗ್ಗೆ ಮತ್ತು ಸಂಜೆ ಇಲ್ಲಿ ವಾಯುವಿಹಾರಕ್ಕೆ ಹೆಚ್ಚು ಜನ ಬರುತ್ತಾರೆ. ಅವರಿಂದಲೇ ನನ್ನ ಬದುಕು...' ಎನ್ನುತ್ತಲೇ ಮಸಾಲಾ ಶೇಂಗಾ ಕೈಗಿಟ್ಟರು ಎಡಗೈ ಕಳೆದುಕೊಂಡಿದ್ದ ಸೂರಜ್.

ಸಮುದ್ರ ದಂಡೆ ಮೇಲೆ ಸೇರಿದ್ದ ನೂರಾರು ಜನ ಹೊನ್ನಿನ ಬಣ್ಣದ ಸೂರ್ಯನ ಕಣ್ತುಂಬಿಕೊಂಡು, ಫೋಟೊ ತೆಗೆಸಿಕೊಂಡು ಸಂಭ್ರಮಿಸಿದರು.

ಬ್ಯಾಂಡ್ ಸ್ಟ್ಯಾಂಡ್ ಮಧ್ಯಭಾಗದಲ್ಲಿ ಬರುತ್ತಿದ್ದಂತೆ, ಚಿತ್ರಕಲೆಯಲ್ಲಿ ತನ್ಮಯರಾಗಿದ್ದ ಕಲಾವಿದ ಗದ್ದಲದ ಮಧ್ಯೆಯೂ ಜನರ ಗಮನಸೆಳೆಯುತ್ತಿದ್ದರು. ಉಸಿರು ತುಂಬಿ ಬಲೂನ್‌ಗಳನ್ನು ಮಾರುತ್ತಿದ್ದ ಹುಡುಗ ಪುಟ್ಟ ಮಕ್ಕಳಿಗೆ ಬಣ್ಣಬಣ್ಣದ ಬಲೂನ್‌ಗಳನ್ನು ಕೊಟ್ಟು ಚೆಂದದ ನಗು ಬೀರುತ್ತಿದ್ದ. ಕೊಂಚ ದೂರದಲ್ಲಿಯೇ ಕೆಲ ಹುಡುಗರು ರ್‍ಯಾಪ್ ಸಂಗೀತಕ್ಕೆ ಹೆಜ್ಜೆ ಹಾಕುತ್ತ, ಚಿತ್ರೀಕರಣದಲ್ಲಿ ತೊಡಗಿದ್ದರು.

ವಾರಾಂತ್ಯಗಳಲ್ಲಿ ಲಕ್ಷಕ್ಕೂ ಹೆಚ್ಚು ಜನ ಭೇಟಿ ನೀಡುವ ಪ್ರವಾಸಿ ತಾಣ, ಬಾಂದ್ರಾ ಬ್ಯಾಂಡ್ ಸ್ಟ್ಯಾಂಡ್‌ನ ಮತ್ತೊಂದು ಆಕರ್ಷಣೆ, ಬಾಲಿವುಡ್ ತಾರೆಯರ ಮನೆಗಳು. ಇಲ್ಲಿನ ಸುಲ್ತಾನ್ ನಥನಿ ಚೌಕ್ ಸಮೀಪ ಸಮುದ್ರಕ್ಕೆ ಮುಖ ಮಾಡಿದಂತಿರುವ, ಬಾಲಿವುಡ್ ನಟ ಶಾರುಖ್ ಖಾನ್ ಅವರ ಅಂದಾಜು ₹200 ಕೋಟಿ ಮೌಲ್ಯದ, 6 ಅಂತಸ್ತಿನ ಮನೆ 'ಮನ್ನತ್' ನೋಡಲು ಜನ ಕಿಕ್ಕಿರಿದು ಸೇರಿರುತ್ತಾರೆ.

ಮನೆಯ ಎಡಭಾಗದಲ್ಲಿ 'ಮನ್ನತ್' ಮತ್ತು ಬಲಭಾಗದಲ್ಲಿ 'ಲ್ಯಾಂಡ್ಸ್ ಎಂಡ್' ಎಂಬ ಹೊಳೆಯುವ ಹರಳುಗಳಲ್ಲೇ ಮೈದಳೆದಿರುವ ನಾಮಫಲಕ ಇದೆ. ಈ 'ಮನ್ನತ್' ಎದುರು ಸೆಲ್ಫಿ, ಫೋಟೊ ತೆಗೆದುಕೊಳ್ಳಲು ನಿತ್ಯ ಜನ ಬರುತ್ತಾರೆ. ಶಾರುಖ್ ದರ್ಶನ ಮಾತ್ರ ಅಪರೂಪ. ಇದೇ ರಸ್ತೆಯಲ್ಲಿ ನಡೆಯುತ್ತ ಸಾಗಿದರೆ, ನಟಿ ರೇಖಾ, ನಟರಾದ ಸಲ್ಮಾನ್ ಖಾನ್, ಜಾನ್ ಅಬ್ರಾಹಂ ಸೇರಿ ಹಲವರ ಮನೆಗಳಿವೆ. ಅಲ್ಲಿಯೂ ಜನದಟ್ಟಣೆ. ಎಲ್ಲವನ್ನೂ ಸುತ್ತು ಹಾಕಿ, ಮರಳುವಾಗ, 'ಬಾಂದ್ರಾ ಬ್ಯಾಂಡ್ ಸ್ಟ್ಯಾಂಡ್' ಮತ್ತೆ ಮತ್ತೆ ಕರೆಯುತ್ತಿರುವಂತೆ ಭಾಸವಾಗುತ್ತಿತ್ತು.

ಪ್ರತಿಕ್ರಿಯಿಸಿ: feedback@sudha.co.in